## *Form No.4.*

## *Deposition Sheet( R.P.52)*

ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

**CC 11/2024**

**CW -14**

**PW-13**

ಸಾಕ್ಷಿಯ ಹೆಸರು ಃ ಅಶೋಕ್

ತಂದೆ ಹೆಸರು ಃ ಜಬ್ಬ ಮರಕರ

ಪ್ರಾಯ ಃ 44 ವರ್ಷ

ಉದ್ಯೋಗ ಃ ಮುಖ್ಯ ಪೇದೆ ಬ್ರಹ್ಮಾವರ ಪೋಲೀಸ್

ವಾಸ ಃ ಬ್ರಹ್ಮಾವಾರ

ದಿನಾಂಕ **:02.05.2025** ರಂದು ಪಿಡಬ್ಲ್ಯೂ - 13 / ಸಿಡಬ್ಲ್ಯೂ - 14 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಹಿರಿಯ ಸ.ಸ.ಅ. ರವರಿಂದಃ

ನಾನು ಕಳೆದ ಆರು ವರ್ಷದಿಂದ ಬ್ರಹ್ಮಾವರ ಪೋಲೀಸ್ ಠಾಣೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದೇನೆ. ದಿನಾಂಕಃ 06.11.2020 ರಂದು ಒಂದನೇ ಎ. ಸಿ. ಜೆ. ಮತ್ತು ಜೆ. ಎಂ ಎಫ್. ಸಿ. ಇವರ ಆದೇಶದಂತೆ ಬ್ರಹ್ಮಾವರ ಪೋಲೀಸ್ ಠಾಣೆಯಿಂದ ಗೇರು ಬೀಜದ ತಿರುಳುಗಳುಳ್ಳ 4 ಪಾಲಿತಿನ್ ಚೀಲ ಗಳನ್ನು

CC 11/2024
CW-14
PW-13

ಸಾಕ್ಷಿದಾರರಾದ ಚಾ.ಸಾ. 10 ಮತ್ತು 12 ರವರು ಸಮಕ್ಷಮದಲ್ಲಿ ಅಜೆಕಾರು ಪೊಲೀಸ್ ಠಾಣೆಯಲ್ಲಿ ಹಾಜರುಪಡಿಸಿದ್ದು, ಚಾ.ಸಾ. 16 ರವರು ಮಹಜರು ಮೂಲಕ ವಶಪಡಿಸಿಕೊಂಡಿರುತ್ತಾರೆ. ನಿಪಿ - 11 ಮಹಜರನ್ನು ಗುರುತಿಸಿದ್ದು, ನನ್ನ ಸಹಿಯನ್ನು ನಿಪಿ - 11 (ಸಿ) ಎಂದು ಗುರುತಿಸಲಾಯಿತು. ಗೇರು ಬೀಜಗಳನ್ನು ತೂಕ ಮಾಡಿದ್ದು, ನಂತರ ಸ್ಥಳದಲ್ಲಿ ನಿಪಿ - 12 ರಂತೆ ಫೋಟೊ ತೆಗೆದಿರುತ್ತಾರೆ.

ಪಾಟೀ ಸವಾಲುಃ ಶ್ರೀ ಪಿ. ಎ. ಎಸ್. 1, ನೇ ಆರೋಪಿ ಪರ ವಕೀಲರಿಂದಃ

ಸದರಿ ಗೇರು ಬೀಜಗಳು ಎಲ್ಲಿಂದ ಮತ್ತು ಹೇಗೆ ಬಂತು ಎಂದು ನನಗೆ ತಿಳಿದಿಲ್ಲ. ನ್ಯಾಯಾಧೀಶರ ಆದೇಶದ ಮೇರೆಗೆ ಹಾಜರುಪಡಿಸಿದ್ದೇನೆ.

ಪಾಟೀ ಸವಾಲುಃ 2 ನೇ ಮತ್ತು 3 ನೇ ಆರೋಪಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅನುಮೋದಿಸುತ್ತಾರೆ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,

ಕಾರ್ಕಳ.